ಅ) ಹಾಗಿದ್ದಲ್ಲಿ ಅವುಗಳನ್ನು ದುರಸ್ಥಿಗೊಳಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹಲವೆಡೆ ರಸ್ತೆಗಳು ನಾದುರಸ್ತಿಯಾಗಿರುವುದು ಗಮನಕ್ಕೆ ಬಂದಿದೆ. ಸಂಚಾರಕ್ಕೆ ತೊಂದರೆಯಾಗಿರುವುದಿಲ್ಲ.

ಆ) ಅನುದಾನದ ಲಭ್ಯತೆಯ ಮೇರೆಗೆ ದುರಸ್ತಿಗೊಳಿಸಲಾಗುತ್ತಿದೆ. ನಬಾರ್ಡ್ ಸಹಾಯದಲ್ಲಿಯ ಸಹಾಯದಲ್ಲಿಯು ಸಹ ಹಳ್ಳಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ರಸ್ತೆ

2308 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ನಿರ್ಮಾಣಕ್ಕೆ ನೀಡಲಿರುವ ಸರ್ಕಾರಿ ಜಮೀನೆಷ್ಟು, ಹಾಗೂ ಈ ಬಗ್ಗೆ ಎಷ್ಟು ಎಕರೆ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು?
2. ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿದೆ?
3. ಕೇವಲ ಬೆಂಗಳೂರು-ಮೈಸೂರು ರಸ್ತೆ ನಿರ್ಮಾಣಕ್ಕೆ ಬೇಕಾಗುವ ಜಮೀನಿನ ವಿಸ್ತೀರ್ಣವೆಷ್ಟು?
4. ಆ ಬಗ್ಗೆ ಖಾಸಗೀ ರೈತರು ತಮ್ಮ ಜಮೀನನ್ನು ಬಿಟ್ಟುಕೊಡಲು ವಿರೋಧ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
5. ಆ ಬಗ್ಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿಗೆ ಎಕರೆ ಒಂದಕ್ಕೆ ನೀಡುವ ಪರಿಹಾರ ಧನವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

1. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇಗೆ ಸುಮಾರು 21,000 ಎಕರೆ ಜಮೀನು ಬೇಕಾಗಿದ್ದು ಅದರಲ್ಲಿ 4000 ಎಕರೆ ಸರ್ಕಾರದ ಜಮೀನು ಆಗಿದ್ದು ಬಾಕಿ ಇರುವ ಜಮೀನನ್ನು ಖಾಸಗಿಯವರಿಂದ ಪಡೆಯಬೇಕಾಗಿರುತ್ತದೆ.

2. ಈ ಕಾಮಗಾರಿಯನ್ನು ಮೆ: ನಂದಿ ಇನ್‌ಪ್ರಾಸ್ಟ್ರಕ್ಚರ್ ಕಾರಡಾರ್ ಎಂಟರ್‌ಪ್ರೈಸಸ್ ಇವರಿಗೆ ಬಿ.ಓ.ಓ.ಟಿ. ಆಧಾರದ ಮೇಲೆ ವಹಿಸಲಾಗಿದೆ.

3. ಬೆಂಗಳೂರು-ಮೈಸೂರು ರಸ್ತೆ ನಿರ್ಮಾಣಕ್ಕೆ 7,000 ಎಕರೆ ಜಮೀನು ಬೇಕಿರುತ್ತದೆ.

4. ಇದುವರೆವಿಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

5. ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ.ರವರ ಅಧಿಸೂಚನೆ ಹೊರಡಿಸಲಿದ್ದು ಎಕರೆ ಒಂದಕ್ಕೆ ಪರಿಹಾರ ನೀಡುವ ಮೊತ್ತ ಇನ್ನೂ ನಿಗಧಿಪಡಿಸಿಲ್ಲ.

ದ. ಕನ್ನಡ ಜಿಲ್ಲೆ ಲೋಕೋಪಯೋಗೆ ವಿಭಾಗದಲ್ಲಿ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಹಣ.

2309 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆ ಲೋಕೋಪಯೋಗಿ ವಿಭಾಗದಲ್ಲಿ ಗುತ್ತಿಗೆದಾರರಿಗೆ ಪಾವತಿ ಮಾಡಲು ಬಾಕಿ ಉಳಿದಿರುವ ಬಿಲ್ಲುಗಳ ಮೊತ್ತವೆಷ್ಟು? ಇದನ್ನು ಯಾವಾಗ ಪಾವತಿ ಮಾಡಲಾಗುವುದು?*

ಆ) *ಈ ವರ್ಷದಲ್ಲಿ ಕಿಲೋಮೀಟರಿಗೆ ಎಷ್ಟು ಮೆಂಟೆನೆನ್ಸ್ ಗ್ರಾಂಟನ್ನು ಒದಗಿಸಲಾಗಿದೆ? ಈ ಮೊತ್ತವನ್ನು ಕಡಿಮೆ ಏನಾದರೂ ಮಾಡಲಾಗಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಇ) *ಗ್ಯಾಂಗ್‌ಮೆನ್‌ಗಳ ನಿಯೋಜನೆಯನ್ನು ಪುನರ್ ಪರಿಶೀಲಿಸಿ ಗ್ಯಾಂಗ್‌ಮೆನ್‌ಗಳನ್ನು ನೇಮಕ ಮಾಡುವ ಇರಾದೆ ಸರ್ಕಾರಕ್ಕಿದೆಯೇ? ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 312.57 ಲಕ್ಷ ರೂ.ಗಳ ಹಣ ಭರವಸೆ ಪತ್ರದ ಬಿಡುಗಡೆಯನ್ನಾಧರಿಸಿ ಪಾವತಿ ಮಾಡಲಾಗುವುದು.

ಆ) ಕಿ.ಮೀ. ವಾರು ಗ್ರಾಂಟನ್ನು ನೀಡಲಾಗುವುದಿಲ್ಲ. ರಸ್ತೆಯ ದುರಸ್ತಿ ಕಾಮಗಾರಿಗಳ ಆಧಾರಿತ ಅನುದಾನವನ್ನು ನೀಡಲಾಗುವುದು.

1996-97	340.07 ಲಕ್ಷ ರೂ.
1997-98	440.50 ಲಕ್ಷ ರೂ.

ಅನುದಾನ ಕಡಿಮೆಯಾಗಿಲ್ಲ.

ಇ) ಇಲ್ಲ.

ಆಳ ಸಮುದ್ರ ಮೀನುಗಾರಿಕೆ

2311 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ಹಿಂದೆ ಸರ್ಕಾರ ಹಲವಾರು ಒಪ್ಪಂದಗಳನ್ನು ಆಳ ಸಮುದ್ರ ಮೀನುಗಾರಿಕೆಗಾಗಿ ಮಾಡಿಕೊಂಡಿದ್ದು ಇದರಿಂದ ಕರಾವಳಿಯ ಸಾಮಾನ್ಯ ಮೀನುಗಾರರಿಗೆ ಆದ ತೊಂದರೆಗಳು*